

ಹಿಮಾಚಲ ಪ್ರದೇಶದಲ್ಲಿ ನೋಟ ಹರಿದಲ್ಲೆಲ್ಲ ಹಸಿರು ಸಿರಿ ದರ್ಶನ

## ಪರ್ವತಗಳ ರಾಣಿ

ಶಿಮ್ಲಾ ಹೆಸರು ದುರ್ಗೆಯ ಮತ್ತೊಂದು ರೂಪವಾದ ಮಾತೆ ಶ್ಯಾಮಲೆಯಿಂದ ಬಂದದ್ದು. 'ಕಾಳಿಬರಿ ಟೆಂಪಲ್' ನಗರದ ಪ್ರಸಿದ್ಧ ಸ್ಥಳ.

ನಾವಿದ್ದ ಹೋಟೆಲ್ ಒಂದು ಸಣ್ಣ ಗುಡ್ಡದ ಮೇಲಿತ್ತು. ರೂಮಿಗೆ ಬಂದು ಬಾಲ್ಕನಿಯಿಂದ ಹೊರಬಂದರೆ ದೂರದಲ್ಲಿ ಹಿಮಾಲಯದ ಸಾಲು ಹಾಗೂ ಕಣ್ಣಿಗೆ ಕಟ್ಟುವಂತಹ 'ಶಿವಾಲಿಕ್ ಹಿಲ್ಸ್' (ಉಪ ಹಿಮಾಲಯ) ದರ್ಶನ. ಕಣ್ಣು ಹಾಯಿಸಿದಷ್ಟೂ ದೂರ ಪ್ರಕೃತಿಯ ಅನುಪಮ ಸೊಬಗು.

ಮಾಲ್ ರೋಡ್ ನೋಟವೊಂದು ಸುಂದರ ಅನುಭವ. ರೋಡ್ ಸೈಡ್ ಅಂಗಡಿಗಳಿಂದ ಹಿಡಿದು ಬ್ರಾಂಡೆಡ್ ಶೋ ರೂಮಿನ ತನಕ ಎಲ್ಲವೂ ಅಲ್ಲುಂಟು. ಹಳೆಯ ಥಿಯೇಟರ್, ದೂರದಿಂದ ಕಾಣುವ ಝಾಕು ಟೆಂಪಲ್ (ಹನುಮನ ದೊಡ್ಡ ವಿಗ್ರಹ), ಭಾರತದ ದೊಡ್ಡ ಬಾವುಟ ಹಾರುತ್ತಿದ್ದುದು, 'ಥ್ರೀ ಈಡಿಯಟ್ಸ್' ಸಿನಿಮಾದ ರಾಂಚೋಡ್ ದಾಸ್ ಮನೆ – ಹೀಗೆ ಶಿಮ್ಲಾದ ಚಿತ್ತಾಪಹಾರಿ ದೃಶ್ಯಗಳು ಒಂದೇ ಎರಡೇ...

ಶಿಮ್ಲಾದ ಹೃದಯ ಭಾಗವೆಂದೋ ಏನೋ, ಮಾಲ್ ರೋಡ್‌ಗೆ ಯುವಜನರಿಗೆ ಅದೊಂದು ಅತ್ಯುತ್ತಮ ಹ್ಯಾಂಗ್ ಔಟ್ ಪ್ಲೇಸ್, ಕಾಲಕ್ಷೇಪದ ಜಾಗ. ಶಿಮ್ಲಾದ ವಿಹಂಗಮ ನೋಟದೊಂದಿಗೆ ಅಲ್ಲಿನ ಯುವಜನತೆಯನ್ನೂ ಕಣ್ತುಂಬಿಕೊಳ್ಳಲು ಆ ಬಜಾರು ಅತ್ಯುತ್ತಮ ಸ್ಥಳ.

## ಪ್ರವಾಸಿಗರ ಕುಲ್ಫಿ 'ಕುಫ್ರಿ'

ಶಿಮ್ಲಾದಿಂದ ಕುಫ್ರಿಗೆ ಹೊರಟೆವು. ಶಿಮ್ಲಾದಿಂದ ಸುಮಾರು ಇಪ್ಪತ್ತು ಕಿ.ಮೀ. ದೂರದ ಸಣ್ಣ ಊರದು. ಹೆಚ್ಚು ಹಿಮ ಬೀಳುವ ಪ್ರದೇಶ ಕುಫ್ರಿ ಚಾರಣಿಗರ ಸ್ವರ್ಗವೂ ಹೌದು. ನಾವು ಕುಫ್ರಿ ತಲುಪುವ ದಾರಿಯಲ್ಲಿ ಅನೇಕ ಯಾಕ್‌ಗಳನ್ನು (ಎಮ್ಮೆ, ಕಾಡೆಮ್ಮೆಗಳ ಸೋದರ ಸಂಬಂಧಿ) ಕಂಡೆವು. ಅವುಗಳ ಮೇಲೆ ಕೂತು ಫೋಟೊ ಕ್ಲಿಕ್ಕಿಸಿಕೊಳ್ಳುವುದು ಪ್ರವಾಸಿಗರ ಹವ್ಯಾಸ. ನಾವೂ ಪ್ರವಾಸಿಗರಲ್ಲಿ ಪ್ರವಾಸಿಗರಾಗಿ ಯಾಕ್ ಮಾಲೀಕ ಕೊಡುವ ಉಡುಪು ಧರಿಸಿ, ಗನ್ ಹಿಡಿದು, ಅಮೆರಿಕನ್ ಕೌಬಾಯ್ ಶೈಲಿಯಲ್ಲಿ (ದನ ಕಾಯುವವರಂತೆ), ಯಾಕ್‌ಗಳ ಮೇಲೆ ಕೂತು ಮಕ್ಕಳ ಉತ್ಸಾಹದಲ್ಲಿ ಫೋಟೊ ತೆಗೆಸಿಕೊಂಡೆವು.

ಮಹಸು ಶಿಖರ ಅಲ್ಲಿಯ ಎತ್ತರದ ಪ್ರದೇಶ. ಕುದುರೆಗಳ ಮೂಲಕ ಅದನ್ನು ಏರಬೇಕು. ಹದಿನೈದರಿಂದ ಇಪ್ಪತ್ತು ನಿಮಿಷಗಳ ಆ ಪಯಣ ನಿಜಕ್ಕೂ ರೋಚಕ, ಭಯಾನಕ. ಕುದುರೆ ಚೂರು ಜಾರಿದರೂ ಆಪತ್ತು ಕಟ್ಟಿಟ್ಟ ಬುತ್ತಿ. ಮರಗಟ್ಟಿಸುವ ಚಳಿ ವಾತಾವರಣದಲ್ಲಿ, ಹಿಂಡು ಹಿಂಡು ಕೋತಿಗಳನ್ನು ದಾಟಿ ಮುಂದೆ ಹೋದರೆ ದೂರದಲ್ಲಿ ಬದರಿನಾಥ, ಕೇದಾರನಾಥದ ದರ್ಶನ. ಚೀನಾದ ಸರಹದ್ದು, ಹಿಮಾಲಯ ಪರ್ವತ ಶ್ರೇಣಿಗಳೂ ಕಣ್ತುಂಬುತ್ತವೆ. ಆ ದೃಶ್ಯವೈಭವ ಎಷ್ಟು ನೋಡಿದರೂ ಮುಗಿಯದಂತಹದ್ದು.

ಚಂಡೀಗಢಕ್ಕೆ ಬರುವಾಗ ರೋಪ್ ವೇ ಕಾರ್ ಕಂಡು ನಿಲ್ಲಿಸಿದೆವು. ಅದೊಂದು ಬೆಟ್ಟದ ಮೇಲಿದ್ದ ಟಿಂಬರ್ ಟ್ರೈಲ್ ರೆಸಾರ್ಟ್. ಕೇಬಲ್ ಕಾರ್ ಹತ್ತಿ ಹೊರಟೇ ಬಿಟ್ಟೆವು! ಕಣಿವೆಯ ಮೇಲೆ ಕೇಬಲ್ ಕಾರಿನಲ್ಲಿ ಹೋಗಿ ಬೆಟ್ಟದ ಮೇಲಿದ್ದ ರೆಸಾರ್ಟ್ ಮುಟ್ಟುವ ಅನುಭವ ಅವಿಸ್ಮರಣೀಯ. ಅಲ್ಲೇ ಊಟ ಮುಗಿಸಿ ಮತ್ತದೇ ಕೇಬಲ್ ಕಾರ್‌ನಲ್ಲಿ ಹಿಂತಿರುಗಿದೆವು.

ಹಿಮಾಚಲ ಪ್ರದೇಶದಲ್ಲೀಗ ಚಳಿ ಅರಳುವ ಸಮಯ. ಮೈಮನಗಳಿಗೆ ಹೊಸ ಹುಮ್ಮಸ್ಸು ಮತ್ತು ಕಾವಿನ ಹಂಬಲ ಹುಟ್ಟಿಸುವ ಈ ಸಮಯ, ಹಿಮಾಲಯದ ತಪ್ಪಲಿನ ನಾಡಿನಲ್ಲಿ ಪ್ರವಾಸ ಕೈಗೊಳ್ಳಲು ಸಹೃದಯಿಗಳು–ಸಾಹಸಿಗರನ್ನು ಆಕರ್ಷಿಸುವ ಸಮಯ.

ಪ್ರತಿಕ್ರಿಯಿಸಿ: **feedback@sudha.co.in**



ಹಿಮಾಚ್ಛಾದಿತ ಮೋಹಕ ಕುಫ್ರಿ